

# ಹಾರ್ಡ್ ಕೌರ್ ಹಾರ್ಡ್ ಕೇಸ್

ತರನ್ ಕೌರ್ ಧಿಲ್ಲಾನ್ ಎನ್ನುವುದು ಈಕೆಯ ಹೆಸರು. ಆದರೆ 'ಹಾರ್ಡ್ ಕೌರ್' ಎಂದೇ ಜನಪ್ರಿಯೆ. ಭಾರತದ ಮೊತ್ತ ಮೊದಲ ಮಹಿಳಾ ಹಿಪ್‌ಹಾಪ್ ಕಲಾವಿದೆ. ಕಾನ್ಪುರದಲ್ಲಿ ಜನಿಸಿದ ಈಕೆಯದ್ದು ಈಗ ಲಂಡನ್ ವಾಸ. ಬಾಲಿವುಡ್ ಸಿನಿಮಾಗಳಲ್ಲಿ ಮಾದಕ ಹಾಡುಗಳ ಮೂಲಕ ಖ್ಯಾತಿ ಹೊಂದಿರುವ ಈಕೆ, ಈಗ ಖ್ಯಾತಿಯ ಇನ್ನೊಂದು ಮಜಲನ್ನು ದಾಟಿದಂತಿದೆ. ಅದಕ್ಕೆ ಕಾರಣ ಈಕೆಯ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಕೆಲವರ ಕುರಿತು ಮಾಡಿರುವ ನಿಂದನೆ. ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿರುದ್ಧ ಈಕೆ ಇನ್‌ಸ್ಟಾಗ್ರಾಮ್‌ನಲ್ಲಿ ಹರಿಬಿಟ್ಟಿರುವ ನಿಂದನೆ, ಕಟುಟೀಕೆಗಳ ಹಿನ್ನೆಲೆಯಲ್ಲಿ ಪೊಲೀಸರು ಕೇಸು ದಾಖಲಿಸಿದ್ದಾರೆ. ಸೆಕ್ಷನ್ 124ಎ (ದೇಶದ್ರೋಹ) ಹಾಗೂ ಐಪಿಸಿಯ ಸೆಕ್ಷನ್ 153ಎ, 500, 505 (ನಿಂದೆ, ಮಾನಹಾನಿ ಇತ್ಯಾದಿ) ಮತ್ತು ಐಟಿ ಕಾಯ್ದೆಯ ಸೆಕ್ಷನ್ 66 ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಹಿಂದೆ ಹಾರ್ಡ್ ಕೌರ್ ತನ್ನ ಸಡಿಲ ನಾಲಿಗೆಯಿಂದ ಹಲವು ಸಲ ಸುದ್ದಿ ಮಾಡಿದ್ದರೂ, ಈ ಸಲದ ಪ್ರಕರಣ ಈಕೆಯನ್ನು ಜೈಲಿಗೆ ತಳ್ಳುವಂತೆ ಕಾಣುತ್ತಿದೆ.

ಇನ್‌ಸ್ಟಾಗ್ರಾಮ್‌ನಲ್ಲಿ ಕೆಲವು ದಿನಗಳಿಂದ ಆರೆಸ್ಸೆಸ್ ವಿರುದ್ಧ ಟೀಕೆಯ ಸುರಿಮಳೆಯೇ ಹರಿದಿದೆ. 'ಪುಲ್ವಾಮಾ ದಾಳಿ ಮತ್ತು 26/11ರ ದಾಳಿ ಸಹಿತ ಭಾರತದಲ್ಲಿ ನಡೆದಿರುವ ಎಲ್ಲ ಭಯೋತ್ಪಾದಕ ದಾಳಿಗಳಿಗೂ ಆರೆಸ್ಸೆಸ್ ಕಾರಣ. ಸಾಂವಿಧಾನಿಕ ಜಾತೀವಾದ ಅಪರಾಧ. ಗಾಂಧಿಯನ್ನು ಗೋಡ್ಸೆ ಕೊಂದ ಬಳಿಕ ಸರ್ದಾರ್ ಪಟೇಲರು ಆರೆಸ್ಸೆಸ್ಸನ್ನು ನಿಷೇಧಿಸಿದ್ದರು. ಇತಿಹಾಸದಲ್ಲಿ ಭಗವಾನ್ ಬುದ್ಧ ಮತ್ತು ಮಹಾವೀರರು ಬ್ರಾಹ್ಮಣ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದರು. ನೀವು ರಾಷ್ಟ್ರೀಯವಾದಿಗಳಲ್ಲ, ಜನಾಂಗೀಯ ಕೊಲೆಗಡುಕರು' ಎಂದಿರುವ ಈ ಪೋಸ್ಟ್‌ನಲ್ಲಿ ಅಶ್ಲೀಲ ಶಬ್ದಗಳೂ ಇವೆ. ಉತ್ತರ ಪ್ರದೇಶದಲ್ಲಿ ಹೆಚ್ಚುತ್ತಿರುವ ಅತ್ಯಾಚಾರಗಳನ್ನು ಪ್ರಸ್ತಾಪಿಸಿ, 'ಈತ ಸೂಪರ್‌ಮ್ಯಾನ್ ಅಲ್ಲ, ರೇಪ್‌ಮ್ಯಾನ್ ಯೋಗಿ' ಎಂದು ಮುಖ್ಯಮಂತ್ರಿಯ ಫೋಟೊ ಹಾಕಲಾಗಿದೆ. ಕೆಲವು ಪೋಸ್ಟ್‌ಗಳಲ್ಲಿ ಕರ್ಕರೆಯ, ಗೌರಿ ಲಂಕೇಶ್ ಹತ್ಯೆಯ ಬಗ್ಗೆಯೂ ಪ್ರಸ್ತಾಪಿಸಿದ್ದು 'ಎಲ್ಲದಕ್ಕೂ ಆರೆಸ್ಸೆಸ್ ಕಾರಣ' ಎಂದು ಕೌರ್ ಬರೆದಿದ್ದಾಳೆ.

12 ವರ್ಷಗಳ ಹಿಂದೆ 'ಜಾನಿ ಗದ್ದಾರ್' ಸಿನಿಮಾದಲ್ಲಿ 'ಪೈಸಾ ಫೇಕ್' ಹಾಡು ಸೂಪರ್‌ಹಿಟ್ ಆದ ಬಳಿಕ ಬಾಲಿವುಡ್ ಈಕೆಯತ್ತ ಕಣ್ಣರಳಿಸಿ ನೋಡಿತು. ರಾಪ್ ಗಾಯಕಿಯಾಗಿ, 'ಅಗ್ಲಿ ಔರ್ ಪಗ್ಲಿ' ಸಿನಿಮಾದಲ್ಲಿ ಅನ್‌ಮೋಲ್ ಮತ್ತು ಮಿಖಾ ಜೊತೆಗಿನ 'ಮೈ ತಲ್ಲೀ ಹೋಗಯಾ' ಮತ್ತು 'ಎಬಿಸಿಡಿ' ಸಿನಿಮಾದಲ್ಲಿ 'ಸದ್ದಾ ದಿಲ್ ವಿ ತು ಗಾ ಗಾ ಗಣಪತ್' ಹಾಡುಗಳು ಖ್ಯಾತಿ ತಂದುಕೊಟ್ಟವು. ಪಂಜಾಬಿ, ತೆಲುಗು, ತಮಿಳು, ಬಂಗಾಳಿ ಚಿತ್ರಗಳಲ್ಲೂ ಹಾಡಿದಳು. ಟೀವಿ ಷೋ 'ಜಲಖ್ ದಿಖ್ಲಾ ಜಾ' ಮತ್ತು 'ಬಿಗ್‌ಬಾಸ್ 6'ಬಳಿಕ ಬಾಲಿವುಡ್‌ನಲ್ಲಿ ಮನೆಮಾತಾದಳು.

ಬಾಲ್ಯದಲ್ಲಿ ಈಕೆಯದ್ದು ಕಷ್ಟದ ಹಾದಿಯೇ. ತಂದೆಯನ್ನು ಎಳೆಯಪ್ರಾಯದಲ್ಲೇ ಕಳೆದುಕೊಂಡದ್ದು, ತಾಯಿ ಕಾನ್ಪುರದಲ್ಲಿ ಸಣ್ಣದೊಂದು ಬ್ಯೂಟಿ ಪಾರ್ಲರ್ ಇಟ್ಟು ಜೀವನ ಸಾಗಿಸಿದ್ದು, ಆ ಅಂಗಡಿಗೆ ಯಾರೋ ಬೆಂಕಿ ಹಚ್ಚಿದ್ದು, ಅಜ್ಜ–ಅಜ್ಜಿ ಈಕೆಯ ತಾಯಿಯನ್ನು ದೂರ ಮಾಡಿದ್ದು– ಎಲ್ಲವೂ ದುಃಖದ ನೆನಪುಗಳೇ. ಅಲ್ಲಿಂದ ಹೋಶಿಯಾರ್‌ಪುರಕ್ಕೆ ಹೋದರು ತಾಯಿ–ಮಗಳು. 1991ರಲ್ಲಿ ಈಕೆಯ ತಾಯಿ ಬ್ರಿಟಿಷ್ ಪ್ರಜೆಯೊಬ್ಬನನ್ನು ಮದುವೆಯಾದ ಬಳಿಕ ಬರ್ಮಿಂಗ್‌ಹ್ಯಾಮ್‌ನಲ್ಲಿ ವಾಸ. ಅಲ್ಲಿ ಸಂಗೀತದ ಹುಚ್ಚು ಹತ್ತಿ ಶಿಕ್ಷಣ ಮುಂದಕ್ಕೆ ಹೋಗಲಿಲ್ಲ. ಕಠಿಣ ಅಭ್ಯಾಸದ ಮೂಲಕ ಹಿಪ್‌ಹಾಪ್ ಕುಣಿತದಲ್ಲಿ ಪಾರಮ್ಯ ಸಾಧಿಸಿದ ಕೌರ್, ಮೊದಲ ವಿಡಿಯೊ ಹಾಡಿನಲ್ಲಿ ಪಡೆದ ಖ್ಯಾತಿ ಬಾಲಿವುಡ್‌ನತ್ತ ಸೆಳೆಯಿತು. 'ಸಿಂಗ್ ಈಸ್ ಕಿಂಗ್', ಕಿಸ್ಮತ್ ಕನೆಕ್ಷನ್, ಬಚ್‌ನಾ ಯೆ ಹಸೀನಾ, ರಾಮ್ ಗೋಪಾಲ್ ವರ್ಮಾ ಕಿ ಆಗ್, ಅಜಬ್ ಪ್ರೇಮ್ ಕಿ ಘಜಬ್ ಕಹಾನಿ, ಪ್ರಿನ್ಸ್ ಚಿತ್ರಗಳಲ್ಲಿ ಹಾಡುಗಳು ಹಿಟ್ ಆದವು. 2007ರಲ್ಲಿ ಮೊದಲ ಸಿಂಗಲ್ ಆಲ್ಬಂ 'ಸುಪಾ ವುಮನ್' ಬಿಡುಗಡೆಯಾಯಿತು. ಮರುವರ್ಷ ಬ್ರಿಟನ್ನಿನ 'ಬೆಸ್ಟ್ ಫಿಮೇಲ್ ಆ್ಯಕ್ಟ್' ಪ್ರಶಸ್ತಿ ಗೆದ್ದುಕೊಂಡಳು. 2012ರಲ್ಲಿ 'ಪಾರ್ಟಿ ಲೌಡ್ ಆಲ್ ಇಯರ್' ಎಂಬ ಎರಡನೇ ಮ್ಯೂಸಿಕ್ ಆಲ್ಬಂ ಬಂತು. ಸ್ವತಃ ಸಾಹಿತ್ಯ ಬರೆದು ಕಂಪೋಸ್ ಮಾಡಿದ ಈ ಆಲ್ಬಂನಲ್ಲಿ 'ಮುಜೆ ಪೀನೆ ದೋ' ಎಂಬ ಹಾಡು ಸೂಪರ್‌ಹಿಟ್. ಬಳಿಕ ಕೋಕ್ ಸ್ಟುಡಿಯೊ ಇಂಡಿಯಾ, ಕಂಪೋಸರ್ ರಾಮ್ ಸಂಪತ್ ಮತ್ತು ರಾಜಸ್ತಾನಿ ಜಾನಪದ ಗಾಯಕಿ ಭನ್ವಾರಿ ದೇವಿ ಜೊತೆ ಸೇರಿ ತಂದ ಆಲ್ಬಂ ಹಾರ್ಡ್ ಕೌರ್‌ಗೆ ವಿಮರ್ಶಕರ ಮೆಚ್ಚುಗೆಯನ್ನೂ ಗಳಿಸಿಕೊಟ್ಟಿತು.

ಸಂದರ್ಶನವೊಂದರಲ್ಲಿ 'ಇಷ್ಟೊಂದು ಜನಪ್ರಿಯತೆ ಗಳಿಸಲು ತುಂಬ ಕಷ್ಟಪಟ್ಟಿದ್ದೇನೆ. ಬೆವರು ಮತ್ತು ಕಣ್ಣೀರು ಸುರಿಸಿದ್ದೇನೆ' ಎಂದಿದ್ದಳು ಹಾರ್ಡ್ ಕೌರ್. ಈಗ ದೇಶದ್ರೋಹದ ಮೊಕದ್ದಮೆಯನ್ನು ಗಮನಿಸಿದರೆ, ಈಕೆ ಇನ್ನಷ್ಟು ಕಣ್ಣೀರು ಸುರಿಸಬೇಕಾಗಿ ಬರಬಹುದು.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65